APRIL 30, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಬೆಂಗಳೂರಿನ ಬೌರಿಂಗ್ ಆಸ್ಪತ್ರೆ, ಗೋಡೆ ಕುಸಿತ;** ಇಬ್ಬರು ಮಕ್ಕಳು ಸೇರಿ, 7 ಜನ ಸಾವು; 9 ಮಂದಿಗೆ ಗಾಯ.
- **ಮಾನವ ಹಕ್ಕು ಉಲ್ಲಂಘನೆ;** ಆಯೋಗಕ್ಕೆ, ಪ್ರತಿ ತಿಂಗಳು 500 ದೂರುಗಳ ಸಲ್ಲಿಕೆ.
- ***ಸೃಷ್ಟಿಇನ್ನೋವೇಷನ್ ಎಕ್ಸಚೇಂಜ್ 20'26;*** ಧಾರವಾಡದ ಎಸ್.ಡಿ.ಎಂ. ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ, ಇಂದು ಸಮಾರೋಪ.
- **ರಾಷ್ಟ್ರೀಯ, ಭಾರತೀಯ ಶೈಲಿ ಕುಸ್ತಿ ಪಂದ್ಯಾವಳಿ;** ಧಾರವಾಡದ ಕೆಸಿಡಿ ಕಾಲೇಜು ಮೈದಾನದಲ್ಲಿ, ಮೇ 3 ರಂದು, ಆಯ್ಕೆ.

<><><>

**ಈಗ ವಾರ್ತೆಗಳ ವಿವರ**

<><><>

**ಬೆಂಗಳೂರಿನಲ್ಲಿ, ನಿನ್ನೆ ಸಂಜೆ ಸುರಿದ ಭಾರೀ ಮಳೆಗೆ,** ಬೆಂಗಳೂರಿನ ಶಿವಾಜಿನಗರದ, ಬೌರಿಂಗ್ ಆಸ್ಪತ್ರೆಯ, ತುರ್ತು ಚಿಕಿತ್ಸಾ ವಿಭಾಗ ಬಳಿಯ, ಗೋಡೆ ಕುಸಿದು, ಇಬ್ಬರು ಮಕ್ಕಳು ಸೇರಿದಂತೆ, 7 ಜನ ಬೀದಿ ವ್ಯಾಪಾರಸ್ಥರು, ದಾರಿಹೋವುಕರು ಮೃತಪಟ್ಟು, 9 ಜನ ಗಾಯಗೊಂಡಿದ್ದಾರೆ.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ,** ಉಪ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ, ದುರ್ಘಟನೆ ಸ್ಥಳಕ್ಕೆ ರಾತ್ರಿ ಭೇಟಿ ನೀಡಿ, ಹಿರಿಯ ಅಧಿಕಾರಿಗಳೊಂದಿಗೆ ಪರಿಶೀಲಿಸಿದರು. ಬಳಿಕ, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿ, ಗಾಯಗೊಂಡವರ ಕುಶಲ ವಿಚಾರಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಮೃತರ ಕುಟುಂಬಕ್ಕೆ ತಲಾ ಐದು ಲಕ್ಷ ರೂಪಾಯಿ ಪರಿಹಾರ, ಗಾಯಗೊಂಡವರಿಗೆ ಉಚಿತ ಚಿಕಿತ್ಸೆ ಹಾಗೂ ಪ್ರಕರಣದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ, ತಿಳಿಸಿದರು.

<><><>

**ಬೌರಿಂಗ್ ಆಸ್ಪತ್ರೆ ಗೋಡೆ ಕುಸಿದು,** ಹಲವರು ಪ್ರಾಣ ಕಳೆದುಕೊಂಡು, ಗಾಯಗೊಂಡ ದುರ್ಘಟನೆ, ತೀವ್ರ ಆಘಾತ ಉಂಟು ಮಾಡಿದ್ದು, ಮೃತಪಟ್ಟವರ ಕುಟುಂಬಕ್ಕೆ, ತಲಾ 10 ಲಕ್ಷ ರೂಪಾಯಿ ಪರಿಹಾರ ನೀಡುವಂತೆ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

<><><>

**ತುರ್ತು ಸಂದರ್ಭಗಳಲ್ಲಿ,** ಬೆಂಗಳೂರಿನ ನಾಗರಿಕರು, ನಿಯಂತ್ರಣ ಕೊಠಡಿ ಸಂಖ್ಯೆ – 1–5–3–3 ಕ್ಕೆ ಕರೆ ಮಾಡಲು, ಗ್ರೇಟರ್ ಬೆಂಗಳೂರು ಮಹಾನಗರ ಪಾಲಿಕೆ, ವಿನಂತಿಸಿದೆ.

<><><>

**ಬೆಂಗಳೂರಿನ ಶಿವಾಜಿನಗರದ,** ಬೌರಿಂಗ್ ಆಸ್ಪತ್ರೆಯ, ತಡೆಗೋಡೆ ಕುಸಿದು ಸಂಭವಿಸಿದ ಜೀವಹಾನಿ, ದುಃಖಕರ. ಮೃತರ ಕುಟುಂಬಗಳಿಗೆ ತಮ್ಮ ಸಂತಾಪ ಹಾಗೂ ಗಾಯಗೊಂಡವರು, ಶೀಘ್ರ ಚೇತರಿಸಿಕೊಳ್ಳಲಿ ಎಂದು, ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡ, ಪ್ರಾರ್ಥಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ,**ಮೃತರ ಕುಟುಂಬಗಳಿಗೆ, ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ, ತಲಾ 2 ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ, 50 ಸಾವಿರ ರೂಪಾಯಿ, ಪರಿಹಾರ ಪ್ರಕಟಿಸಿದ್ದಾರೆ.

<><><>

**ಇಂದು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು,** ನಿನ್ನೆ ಬೆಂಗಳೂರಿಗೆ ಆಗಮಿಸಿದ, ಕೇಂದ್ರ ವಾರ್ತಾ ಮತ್ತು ಪ್ರಸಾರ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಖಾತೆ ಸಚಿವ, ಡಾಕ್ಟರ್ ಎಲ್. ಮುರುಗನ್ ಅವರನ್ನು, ಭಾರತ ಸರ್ಕಾರದ ವಾರ್ತಾ ಶಾಖೆಯ, ಅಪರ ಮಹಾನಿರ್ದೇಶಕ ಎಸ್.ಜಿ. ರವೀಂದ್ರ, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ, ಸ್ವಾಗತಿಸಿದರು.

<><><>

**ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿ,** ಆಯೋಗದಲ್ಲಿ ಪ್ರತೀ ತಿಂಗಳು ಸುಮಾರು 500 ದೂರುಗಳು ಸಲ್ಲಿಕೆಯಾಗುತ್ತಿವೆ ಎಂದು, ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾಕ್ಟರ್ ಟಿ.ಶಾಮ ಭಟ್ ತಿಳಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಕಾರವಾರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ, ಅವರು ಸಂವಾದ ನಡೆಸಿದರು. ದೂರುಗಳನ್ನು ತ್ವರಿತ ಗತಿಯಲ್ಲಿ ಇತ್ಯರ್ಥ ಪಡಿಸುವ ಸಲುವಾಗಿ, ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡಿ, ಅರ್ಜಿಗಳ ವಿಚಾರಣೆ ನಡೆಸಲಾಗುತ್ತಿದೆ. ಈಗಾಗಲೇ ರಾಜ್ಯದ 29 ಜಿಲ್ಲೆಗಳಲ್ಲಿ ಭೇಟಿ ನೀಡಿದ್ದು, ಆಯೋಗದಲ್ಲಿ ಈ ಹಿಂದೆ ದಾಖಲಾಗಿದ್ದ 8 ಸಾವಿರ ಪ್ರಕರಣಗಳ ಪೈಕಿ, ಪ್ರಸ್ತುತ 3 ಸಾವಿರದಷ್ಟು ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ ಎಂದರು.

<><><>

**ಮೇಕ್ ಇನ್ ಇಂಡಿಯಾ ಹಾಗೂ** ಸ್ಟಾರ್ಟ್‌ಅಪ್ ಇಂಡಿಯಾ ಧ್ಯೇಯದಡಿ, ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ, 3 ದಿನಗಳ ಕಾಲ ಆಯೋಜಿತವಾಗಿದ್ದ, *ಸೃಷ್ಟಿಇನ್ನೋವೇಷನ್ ಎಕ್ಸಚೇಂಜ್ 2026,* ಇಂದು ಸಮಾರೋಪಗೊಳ್ಳಲಿದೆ.

ರಾಜ್ಯದ 100ಕ್ಕೂ ಹೆಚ್ಚು ಮಹಾವಿದ್ಯಾಲಯಗಳನ್ನು ಪ್ರತಿನಿಧಿಸುವ, ಸಾವಿರದ ಐನೂರಕ್ಕೂ ಹೆಚ್ಚು, ಅಭಿಯಾಂತ್ರಿಕ ಮತ್ತು ತಾಂತ್ರಿಕ ವಿದ್ಯಾರ್ಥಿಗಳು, ಈ ತಾಂತ್ರಿಕ ಸಮ್ಮೇಳನದಲ್ಲಿ, ಕಳೆದ ಮೂರು ದಿನಗಳ ಕಾಲ ಸಿದ್ಧ ಪಡಿಸಿದ, ಮಾದರಿಗಳನ್ನು ಪ್ರದರ್ಶಿನಿಯಲ್ಲಿ ಅಣಿಗೊಳಿಸಿದ್ದಾರೆ. 25 ಲಕ್ಷ ರೂಪಾಯಿಗೂ ಹೆಚ್ಚು ಮೌಲ್ಯದ ಬಹುಮಾನಗಳನ್ನು ವಿಜೇತರು ಪಡೆಯಲಿದ್ದಾರೆ.

<><><>

**ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ** ಮಾಹಿತಿ ನೀಡಿದ್ದಾರೆ, ಎಸ್.ಡಿ.ಎಂ. ಅಭಿಯಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯ, ಪ್ರೊಫೆಸರ್ ರಮೇಶ ಚಕ್ರಸಾಲಿ.

<><><>

**ರಮೇಶ ಚಕ್ರಸಾಲಿ ಧ್ವನಿ 58 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಇಂದಿನ ಕರ್ನಾಟಕ ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ,** ಅಂದಿನ ಹುಬ್ಬಳ್ಳಿ ಸಾರಿಗೆ ಸೇವೆಗೆ, ಅಮೃತ ವರ್ಷಾಚರಣೆ ನಾಳೆಗೆ ಸಂಪನ್ನಗೊಂಡು, (ಎನ್.ಡಬ್ಲ್ಯು.ಕೆ.ಎಸ್.ಆರ್.ಟಿ.ಸಿ.) ತನ್ನ ಸಾರ್ಥಕ ಸೇವೆಯ, 76ನೇ ವರ್ಷಕ್ಕೆ ಪಾದಾರ್ಪಣೆ ಮಾಡಲಿದೆ. ಸ್ವಾತಂತ್ರ್ಯಾ ನಂತರ ಸ್ಥಾಪನೆಗೊಂಡ, ಬಾಂಬೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬಿ.ಎಸ್.ಆರ್.ಟಿ.ಸಿ., ಉಪ ವಿಭಾಗದ ಕಚೇರಿ, 1951 ಮೇ 1 ರಂದು, ಹುಬ್ಬಳ್ಳಿಯ ನಾಯಕ್ ಕಟ್ಟಡದಲ್ಲಿ, ಕಾರ್ಯಾರಂಭಿಸಿತು.

<><><>

**ಗದಗ, ಲಕ್ಷ್ಮೇಶ್ವರ, ಸವಣೂರು ಹಾಗೂ** ಹುಬ್ಬಳ್ಳಿ ಡಿಪೊ ಈ ವಿಭಾಗಕ್ಕೆ ಸೇರಿದ್ದವು. ಕರ್ನಾಟಕ ಏಕೀಕರಣದ ರೂವಾರಿ, ಗದಗಿನ ಶಾಂತಪ್ಪಣ್ಣ ಯೆಳಮಲಿ, ಗದಗ ಡಿಪೊಕ್ಕೆ ಪ್ರಾಮುಖ್ಯತೆ ನೀಡಿದ್ದರು.

<><><>

**ಕೆ.ಎಸ್.ಆರ್.ಟಿ.ಸಿ.ಯ** ನಿವೃತ್ತ ಆಡಳಿತಾಧಿಕಾರಿ, 98 ವರ್ಷಗಳ ಹಿರಿಯರು, ಧಾರವಾಡದ ರಾಮಚಂದ್ರ ಧೋಂಗಡಿ, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

**ರಾಮಚಂದ್ರ ಧೋಂಗಡಿ ಧ್ವನಿ 60 ಸೆಕೆಂದುಗಳು**

<><><>

**ಇಂದು, ಆಯು  ಷ್ಮಾನ್ ಭಾರತ ದಿನ,** ಆಚರಿಸಲಾಗುತ್ತಿದೆ. ಆಯು  ಷ್ಮಾನ್ ಭಾರತ; ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ, AB-P.M.J.A.Y ಬಗ್ಗೆ ಜನ ಜಾಗೃತಿ, ಗ್ರಾಮೀಣ, ಬಡ ಜನರಿಗೆ, ಕೈಗೆಟುಕುವ ಆರೋಗ್ಯ ಸೇವೆ ಒದಗಿಸುವುದು, ಈ ಪ್ರಕಲ್ಪದ ಗುರಿ. 2018 ರಲ್ಲಿ ಪ್ರಾರಂಭಿಸಲಾದ, ವಿಶ್ವದ ಅತಿ ದೊಡ್ಡ, ಸರ್ಕಾರಿ ಆರೋಗ್ಯ ವಿಮಾ ಯೋಜನೆ, ಅರ್ಹ ಕುಟುಂಬಗಳಿಗೆ, 5 ಲಕ್ಷ ರೂಪಾಯಿ ವರೆಗೆ, ಉಚಿತ ಚಿಕಿತ್ಸೆ ಒದಗಿಸುತ್ತಿದೆ.

<><><>

**ರಾಷ್ಟ್ರೀಯ ಭಾರತೀಯ ಶೈಲಿ ಕುಸ್ತಿ ಪಂದ್ಯಾವಳಿಗೆ,** ರಾಜ್ಯ ಭಾರತೀಯ ಶೈಲಿ ಕುಸ್ತಿ ಸಂಘ, ಧಾರವಾಡದ ಕರ್ನಾಟಕ ಕಲಾ ಮಹಾವಿದ್ಯಾಲಯದ ಆವರಣದಲ್ಲಿ, ಮೇ 3ನೇ ತಾರೀಖು, ಕುಸ್ತಿಪಟುಗಳನ್ನು ಆಯ್ಕೆ ಮಾಡಲಿದೆ, ಎಂದು, ಸಂಘದ ಅಧ್ಯಕ್ಷ ರತನಕುಮಾರ ಮಠಪತಿ ತಿಳಿಸಿದ್ದಾರೆ. ಧಾರವಾಡದಲ್ಲಿ ಈ ವಿಷಯ ತಿಳಿಸಿದ ಅವರು, ಮಹಾರಾಷ್ಟ್ರದ ಸಾತಾರಾದಲ್ಲಿ, ಮೇ 14 ರಿಂದ 17ರ ವರೆಗೆ, 52ನೇ ಹಿಂದ್ ಕೇಸರಿ ಹಾಗೂ 4ನೇ ಮಹಿಳಾ ಹಿಂದ್ ಕೇಸರಿ, ಭಾರತೀಯ ಶೈಲಿ ಕುಸ್ತಿ ಪಂದ್ಯಾವಳಿ ಆಯೋಜಿತವಾಗಿದೆ. ವಿವಿಧ ತೂಕದ ಕುಸ್ತಿಪಟುಗಳನ್ನು ಸಹ, ರಾಜ್ಯ ಕುಸ್ತಿ ತಂಡಕ್ಕೆ, ಆಯ್ಕೆ ಮಾಡಲಾಗುತ್ತಿದೆ ಎಂದರು.

<><><>

**ಇಂದಿನಿಂದ ಆರಂಭವಾಗುವ,** ದ್ವಿತೀಯ ಪಿ.ಯು.ಸಿ. 2ನೇ ವಾರ್ಷಿಕ ಪರೀಕ್ಷೆ, ಹಾಗೂ ಮೇ 3 ರಂದು ನಡೆಯುವ, ರಾಷ್ಟ್ರೀಯ ಅರ್ಹತಾ ಪರೀಕ್ಷೆ (ನೀಟ್) ಹಿನ್ನೆಲೆ, ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು, ಯಾದಗಿರಿ ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ, ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಬೆಂಗಳೂರಿನ ಬೌರಿಂಗ್ ಆಸ್ಪತ್ರೆ, ಗೋಡೆ ಕುಸಿತ;** ಇಬ್ಬರು ಮಕ್ಕಳು ಸೇರಿ, 7 ಜನ ಸಾವು; 9 ಮಂದಿಗೆ ಗಾಯ.
- **ಮಾನವ ಹಕ್ಕು ಉಲ್ಲಂಘನೆ;** ಆಯೋಗಕ್ಕೆ, ಪ್ರತಿ ತಿಂಗಳು 500 ದೂರುಗಳ ಸಲ್ಲಿಕೆ.
- ***ಸೃಷ್ಟಿಇನ್ನೋವೇಷನ್ ಎಕ್ಸ್‌ಚೇಂಜ್ 20'26;*** ಧಾರವಾಡದ ಎಸ್.ಡಿ.ಎಂ. ಅಭಿಯಾಂತ್ರಿಕ ಮಹಾವಿದ್ಯಾಲಯದಲ್ಲಿ, ಇಂದು ಸಮಾರೋಪ.
- **ರಾಷ್ಟ್ರೀಯ, ಭಾರತೀಯ ಶೈಲಿ ಕುಸ್ತಿ ಪಂದ್ಯಾವಳಿ;** ಧಾರವಾಡದ ಕೆಸಿಡಿ ಕಾಲೇಜು ಮೈದಾನದಲ್ಲಿ, ಮೇ 3 ರಂದು, ಆಯ್ಕೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>